# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 25-03-2021 ಪ್ರಶ್ನೆ ಸಂಖ್ಯೆ : 1842 (2189)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 25-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ನೀರಾವರಿ ಯೋಜನೆ ಪೂರ್ಣಗೊಳ್ಳುವ ಮೊದಲೇ ಬೇರೆ ಉದ್ದೇಶಗಳಿಗೆ ಯೋಜನೆ ಮಾರ್ಪಾಡು ಮಾಡುತ್ತಿರುವ ಕುರಿತು

(ಅ) ನೀರಾವರಿ ಕಾಯ್ದೆಯಲ್ಲಿ ಮೂಲ ಯೋಜನೆ ಪೂರ್ಣಗೊಳ್ಳದೇ ಬೇರೆ ಉದ್ದೇಶಗಳಿಗೆ ಬದಲಾವಣೆ ಮಾಡಬಾರದು ಎಂದಿದ್ದರೂ ವಾರಾಹಿ ಯೋಜನೆಯಲ್ಲಿ ಬೇರೆ ಬೇರೆ ಉದ್ದೇಶಗಳಿಗಾಗಿ ಬೇರೆ ಬೇರೆ ಸಂದರ್ಭದಲ್ಲಿ ಸರ್ಕಾರದ ಆದೇಶದ ಮೂಲಕ ಬದಲಾವಣೆ ಮಾಡಲಾಗಿದೆಯೇ; ಹೌದಾದಲ್ಲಿ, ಕಾರಣವೇನು;

(ಆ) ರಾಜ್ಯದಲ್ಲಿ ಮೂಲ ಯೋಜನೆ ಪೂರ್ಣಗೊಳ್ಳದೇ ಯಾವ ಯಾವ ನದಿಯ ನೀರಾವರಿ ಯೋಜನೆಯನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಉದ್ದೇಶಗಳಿಗಾಗಿ ಬದಲಾವಣೆ ಮಾಡಲಾಗಿದೆ; ಮೂಲ ಯೋಜನೆ ಮತ್ತು ಮಾರ್ಪಾಡು ಮಾಡಿದ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣವೆಷ್ಟು; (ಯೋಜನೆವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಇತ್ತೀಚಿನ ವರ್ಷಗಳಲ್ಲಿ ಯೋಜನೆಗಳು ರೂಪುಗೊಳ್ಳುತ್ತಿರುವುದು ಗುತ್ತಿಗೆದಾರರ ಕಲ್ಯಾಣಕ್ಕಾಗಿಯೇ ಹೊರತು ಸಾರ್ವಜನಿಕ ಹಿತಕ್ಕಾಗಿ ಅಲ್ಲ ಎನ್ನುವ ಭಾವನೆ ಸಾರ್ವಜನಿಕರಲ್ಲಿ ಮೂಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?